Breach of Tanks in Tumkur District

ಶ್ರೀ ಆರ್. ಚಿಕ್ಕಯ್ಯ (ಮಧುಗಿರಿ).—ತುಮಕೂರು ಜಿಲ್ಲೆಯಲ್ಲಿ ಮಧುಗಿರಿ ತಾಲ್ಲೂಕಿನಲ್ಲಿ ಮುಂಗಾರುಮಳೆಯಿಂದ ಕೆರೆಗಳು ಒಡೆದುಹೋಗಿ ಅನೇಕರು ಜಮೀನುಗಳನ್ನು ಮತ್ತು ಮನೆಗಳನ್ನೂ ಕಳೆದುಕೊಂಡಿದ್ದಾರೆ. ರೆವಿನ್ಯೂ ಮಿನಿಸ್ಟರ್ ನೋಡಿ ಅವರಿಗೆ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ತಕ್ಕ ಪರಿಹಾರವನ್ನು ಕೊಡುತ್ತೇನೆಂದು ಹೇಳಿದರು. ಪ್ರಥಮತಃ ಅವರಿಗೆ ಸಾಲ ಏನು ಕೊಡುತ್ತೀರಾ ? ಅಲ್ಲಿರತಕ್ಕ ಬಿ. ಡಿ. ಓ. ಗಳು ಮತ್ತು ರೆವಿನ್ಯೂ ಇನ್‌ಸ್ಪೆಕ್ಟರುಗಳು ನಿಜವಾಗಿ ಆಫೆಕ್ಟೆಡ್ ಏರಿಯಗಳಲ್ಲಿರುವವರಿಗೆ ಏನೇನು ಪರಿಹಾರಗಳನ್ನು ಕೊಟ್ಟಿದ್ದಾರೆಂಬುದನ್ನು ತಿಳಿಸಬೇಕು.

ಅಧ್ಯಕ್ಷರು.—ತಾವು ಅದನ್ನು ನಿನ್ನೆ ಕೊಟ್ಟಿದ್ದು. ಕೇವಲ 24 ಗಂಟೆಯೊಳಗೆ ಪರಿಹಾರ ಆಗುತ್ತದೆಯೇ ? ತಾವು ಕಾಲ್ ಅಟೆನ್‌ಷನ್ ನೋಟೀಸನ್ನು ಅದರ ಬಗ್ಗೆ ಕಳುಹಿಸಿದ್ದೀರಿ. ಅದನ್ನು ನೋಡುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಇಲ್ಲಿ ಏನು ಪ್ರೊಸೀಜರ್ ಇದೆಯೋ ಅದು ನನಗೆ ಅರ್ಥವಾಗಲಿಲ್ಲ. ಈಗ ಅಭಾವ ಪರಿಸ್ಥಿತಿ ಬಗ್ಗೆ ಕ್ಲಾರಿಫಿಕೇಷನ್ ಕೇಳಬೇಕಾಗಿದೆ. ನಾವು 4 ಜನ ಎಂ.ಎಲ್.ಎ.ಗಳು ಇದರ ಬಗ್ಗೆ ತಮಗೆ ಒಂದು ಅಪ್ಲಿಕೇಷನ್ ಕೊಟ್ಟಿದ್ದೆವು. ನಾವು ಹೇಳಿದ ವಿಷಯಗಳಿಗೆಲ್ಲ ಏನೇನು ಉತ್ತರ ಕೊಟ್ಟಿದ್ದೀರಿ ?

ಅಧ್ಯಕ್ಷರು.—ಅವರು ಉತ್ತರ ಹೇಳುವಾಗ ತಾವು ಇಲ್ಲಿಗೆ ಬಾರದಿದ್ದರೆ ಅವರು ಜವಾಬ್ದಾರರಲ್ಲ.

Sri H. S. SIDDAPPA.—Madam Speaker, I would like to draw the attention of the Government through your goodself that a lot of black money is being turned into white money through this lottery ticket. Yesterday an instance came to my notice.

MADAM SPEAKR.—The Hon. member has just now given it. And I will send it to the Government.

List of persons declared as political Sufferers in the State [contd]

ಶ್ರೀ ಎಸ್. ಮೈ. ಪಾಟೀಲ್ (ಸಿಂದಗಿ).—ಈಗ ರಾಷ್ಟ್ರಸೇವೆ ಮಾಡಿರುವ ಜನರಿಗೆ ಭತ್ಯ ಕೊಡುತ್ತಾರೆ. ನಾನು ಒಬ್ಬ ಜೈಲಿಗೆ ಹೋದಂಥ, ವ್ಯಕ್ತಿ. ಸರ್ಕಾರದವರು ಲಸ್ಟ್ ಮಾಡುತ್ತಿದ್ದಾರೆ. ನಾನು ಎಷ್ಟೊಸಾರಿ ಜೈಲಿಗೆ ಹೋಗಿದ್ದೇನೆ. ಅಂದಮೇಲೆ ನಮ್ಮ ಕಡೆ ಎಂ.ಎಲ್.ಎ. ಯಾರಿದ್ದಾರೆಂಬುದನ್ನು ಸರ್ಕಾರ ನೋಡಬೇಕು. ಅದರಲ್ಲಿ ಯಾರನ್ನೂ ಕಮಿಟ್ ಮಾಡುವುದು ಬೇಕಿಲ್ಲ. ಅವರು ನಮ್ಮನ್ನು ಈ ವಿಚಾರದಲ್ಲಿ ಕನ್‌ಸರ್ಟ್ ಮಾಡಬೇಕು. ನಮ್ಮಲ್ಲಿಯೂ ಬಹಳ ಜನ ಪೊಲಿಟಿಕಲ್ ಸಫರರ್ಸ್ ಇದ್ದಾರೆ. ನಾಲ್ಕುವರ್ಷ ಜೈಲಿಗೆ ಹೋಗಿ ನತ್ತ ನಂತರ ಅವರಿಗೆ ಭತ್ಯ ಮಂಜೂರಾಯಿತು. ಈ ಒಂದು ಸನ್ನಿವೇಶದಲ್ಲಿ ನನ್ನ ಸಲಹೆಯನ್ನು ತೆಗೆದುಕೊಳ್ಳಬೇಕು. ನಾನೇನೂ ಭತ್ಯ ತೆಗೆದುಕೊಳ್ಳುವುದಿಲ್ಲ. ಅಸೆಂಬ್ಲಿ ಮೆಂಬರ್ಸ್ ಯಾರು ಹಿಂದೆ ಜೈಲಿಗೆ ಹೋಗಿದ್ದಾರೆ, ಅವರ ಜೊತೆಯಲ್ಲಿ ಮಾನ್ಯ ಮಂತ್ರಿಗಳು ಸಮಾಲೋಚನೆ ಮಾಡಬೇಕು.

ಅಧ್ಯಕ್ಷರು.—ತಾವು ಸಲಹೆ ಕಳುಹಿಸಿದರೆ ಅದನ್ನು ಸರ್ಕಾರದವರು ನೋಡುತ್ತಾರೆ. ಅವರು 30 ಜನರನ್ನು ಆರಿಸಿಲಾಗಿದೆಯೆಂದು ಹೇಳಿದರು. ತಮ್ಮ ಸಲಹೆ ಏನು ಹೇಳುತ್ತಿದ್ದಿರೋ ಅದನ್ನು ನನಗೆ ಬರೆದು ಕಳುಹಿಸಿ. ಅವರಿಗೆ ಅದನ್ನು ಕಳುಹಿಸಿಕೊಡುತ್ತೇನೆ. ಆದರೆ ಸರ್ಕಾರ ಮಾಡುವುದನ್ನೆಲ್ಲಾ ತಮಗೆ ಬರೆದು ಕಳುಹಿಸಿ ಎಂದರೆ ಹೇಗೆ ? ಅವನ್ನು ಪಟ್ಟಿಮಾಡಿ ಬರೆದು ಕೊಟ್ಟು ಇದನ್ನು ಹೀಗೆಯೇ ಮಾಡುತ್ತೇವೆಂದು ಅವರು ತಮಗೆ ಹೇಳುವುದಕ್ಕಾಗುತ್ತದೆಯೇ ? ಎಲ್ಲವನ್ನೂ ಹೀಗೆಯೇ ಕೇಳುತ್ತಾ ಹೋದರೆ ಅವರ ಒಂದು ಮಹತ್ವವೇ ಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ ನಾನು ತಮ್ಮಲ್ಲಿ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಈ ವಿಚಾರದಲ್ಲಿ ತಾವು ನಮಗೆ ರಕ್ಷಣೆ ಕೊಡಬೇಕು.....

ಶ್ರೀ ಎಚ್. ಎಸ್. ಸಿದ್ದಪ್ಪ.—ರೂಲಿಂಗ್ ಪಾರ್ಟಿಯವರು ಒಳಗೊಳಗೇ ತಮಗೆ ಬೇಕಾದವರನ್ನು ಜೈಲ್ಗೆ ಕಳುಹಿಸುವುದಕ್ಕೆ ಹೀಗೆ ಒಂದು ಪ್ಲಾನ್ ಮಾಡಿದ್ದಾರೆ. ಜೈಲಿಗೆ ಹೋಗದೆ ಇದ್ದವರನ್ನೂ ಕೂಡ ಆ ಪಟ್ಟಿಯಲ್ಲಿ ಸೇರಿಸಿದ್ದಾರೆ. ಬಾಕಿಯವರಿಗೆ ಕೇಂದ್ರಕ್ಕೆ ಅರ್ಜಿ ಹಾಕಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಇದು ಬಹಳ ಅನ್ಯಾಯ.....

ಶ್ರೀ ವಾಟಾಳ್ ನಾಗರಾಜ್.—ಆ ಪಟ್ಟಿಯಲ್ಲಿರತಕ್ಕ 30 ಜನರಲ್ಲಿ ಕೆಲವರು ಜೈಲಿಗೆ ಹೋಗದೆ ಇದ್ದವರೂ ಇದ್ದಾರೆ. ಅವರಿಗೆಲ್ಲಾ ಈಗಾಗಲೆ ಪಾಸ್‌ಪೋರ್ಟನ್ನು ತರಿಸಿದ್ದಾರೆ.....

ಅಧ್ಯಕ್ಷರು – ಇಲ್ಲಿ ಪಾಸ್ ಪೋರ್ಟ್ ವಿಷಯ ಎಲ್ಲಿ ಬಂತು ?

ಶ್ರೀ ವಾಟಾಳ್ ನಾಗರಾಜ್.—ಪಾಸ್‌ಪೋರ್ಟಲ್ಲಿ ಅದು ಪಾಸ್. ಪಾಸುಗಳನ್ನು ಅಗಲೇ ತರಿಸಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಈ ವಿಚಾರ ನಮ್ಮ ಸಮಿತಿಯಲ್ಲೂ ಚರ್ಚೆಗೆ ಬಂದಿತು. ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದ ಹಾಗೂ ಜೈಲಿಗೆ ಹೋಗಿದ್ದ ಕೆಲವು ಜನರನ್ನು ಬೆಳ್ಳಿ ಹಬ್ಬದ ಅಂಗವಾಗಿ ದೆಹಲಿಗೆ ಕಳುಹಿಸುತ್ತಾರೆಂಬ ವಿಚಾರದಲ್ಲಿ ಚರ್ಚೆ ನಡೆದದ್ದು ನಿಜ. ಆದರೆ ಅಲ್ಲಿಗೆ ಯಾರನ್ನು ಕಳುಹಿಸಬೇಕು ಎಂಬ ವಿಚಾರ ಸರ್ಕಾರದವರ ವಿವೇಚನೆಗೆ ಬಿಟ್ಟಿದ್ದು. ಆದರೆ ಶ್ರೀ ವಾಟಾಳರು ಜೈಲಿಗೆ ಹೋಗದೆ ಇದ್ದವರನ್ನೂ ದೆಹಲಿಗೆ ಕಳುಹಿಸುತ್ತಿದ್ದಾರೆಂದು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಕೆಲವರಿಗೇನೋ ಬಹಳ ಹೆಚ್ಚಿನ ಆಸೆ ಇದ್ದಹಾಗಿದೆ. ಆದರೆ ಹಿಂದೆ ಜೈಲಿಗೆ ಹೋದ ಆ ವ್ಯಕ್ತಿಗಳೇನಿದ್ದಾರೆ ಅವರು ತಾಮ್ರದ ತಗಡಿನ ಆಸೆಗಾಗಿ ಜೈಲಿಗೆ ಹೋಗಲಿಲ್ಲ. ಅವರು ಆ ದಿವಸ ರಾಷ್ಟ್ರಕ್ಕೆ ಒಳ್ಳೆಯದಾಗಲಿ ಅನ್ನತಕ್ಕ ಒಂದು ನಿಸ್ವಾರ್ಥ ಭಾವನೆಯಿಂದ ಜೈಲಿಗೆ ಹೋದರು. ಸ್ವಾರ್ಥಕ್ಕಾಗಿ ಅವರು ಜೈಲಿಗೆ ಹೋದವರಲ್ಲ. ಆದರೆ ಈ ದಿವಸ ಇಲ್ಲಿಂದ ಇಂಥ ಜನರನ್ನು ಆರಿಸಿ ಕಳುಹಿಸಬೇಕೆಂಬ ಒಂದು ಅಧಿಕಾರ ಇಲ್ಲಿರತಕ್ಕ ರಾಜ್ಯಾಧಿಪತಿಗಳ ಕೈಲಿದೆ. ಅವರ ಇಚ್ಛಾನುಸಾರ ಅವರು ನಡೆದುಕೊಳ್ಳಬಹುದು. ಈ ವಿಚಾರದಲ್ಲಿ ನಾನಂತೂ ಲೇಶವೂ ವ್ಯಥೆ ಪಡುವುದಿಲ್ಲ. ಆದರೆ ವಾಟಾಳರಿಗೆ ಮಾತ್ರ ಈ ವಿಚಾರದಲ್ಲಿ ಬಹಳ ಅನುಕಂಪವಿದೆ. ಯಾರಿಗೆ ಸನ್ಮಾನ ಬೇಕೋ ಅವರೆಲ್ಲ ಹೋಗಬೇಕು. ನನಗಂತೂ ಅದು ಬೇಡ.

ಶ್ರೀ ಎಸ್. ವೈ. ಪಾಟೀಲ್.—ಇವರಿಗೆ ಸನ್ಮಾನ ಬೇಡವಾದರೆ ಅಲ್ಲಿ ಬಾಕಿಯವರಿಗೆ ಅದನ್ನು ಕೊಡುವುದು ಬೇಡ ಎಂದು ಹೇಳುವುದಕ್ಕಾಗುತ್ತದೆಯೇ ?

Issue of Licence for Sale of Kerosene Oil

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಕೆ. ಕೆ. ಮೂರ್ತಿ ಅವರ ವಿಚಾರದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೆ. ಅದರ ಬಗ್ಗೆ ತಾವು...

ಅಧ್ಯಕ್ಷರು.—ಈ ವಿಷಯ ಬಿಸಿನೆಸ್ ಅಡ್ವೈಜರಿ ಸಮಿತಿಯಲ್ಲಿ ಬಂದು ಇದನ್ನು ಡ್ರಾಪ್ ಮಾಡ ಬೇಕೆಂದು ಅಲ್ಲಿ ತೀರ್ಮಾನವಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಅದನ್ನು ಬಿಸಿನೆಸ್ ಅಡ್ವೈಜರಿ ಸಮಿತಿಯವರು ಚರ್ಚೆ ಮಾಡುವುದು ಬೇಡ ಎಂದು ಏಕೆ ಕೈ ಬಿಟ್ಟರು ? ಇದು ಒಂದು ಬಹಳ ಗುರುತರವಾದ ವಿಷಯ. ಲೈಸೆನ್ಸ್ ಇಲ್ಲದೆ ಅವರು ಬ್ಲಾಕ್ ಮಾರ್ಕೆಟ್ಟಿನಲ್ಲಿ ಸೀಮೆ ಎಣ್ಣೆ ವ್ಯಾಪಾರ ಮಾಡುತ್ತಿದ್ದರು...

ಅಧ್ಯಕ್ಷರು.—ಮಾನ್ಯ ಸದಸ್ಯರು ದಯವಿಟ್ಟು ನನ್ನ ಛೇಂಬರಿಗೆ ಬಂದು ಇದರ ಬಗ್ಗೆ ಚರ್ಚೆ ಮಾಡಬೇಕೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ಕಾಲಹರಣ ಮಾಡುವುದು ಬೇಡ.

ಶ್ರೀ ಎಚ್. ಡಿ. ದೇವೇಗೌಡ.—ನಮಗೆ ಅಲ್ಲಿ ರೂಲ್ಸ್ ಆಫ್ ಬಿಜಿನೆಸ್ ಸೆಕ್ಷನ್ 146 ಮತ್ತು 59ರ ಪ್ರಕಾರ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಬಂದಿದ್ದ ವಿಷಯಗಳ ಬಗ್ಗೆ ಕಾಲವನ್ನು ನಿಗದಿ ಮಾಡತಕ್ಕ ಸಂದರ್ಭ ಬಂದಿತ್ತು. ಆಗ ಒಂದು ಚರ್ಚೆ ನಡೆದು ಇದನ್ನು ಕೈಬಿಡಬೇಕೆಂದು ಅಲ್ಲಿ ಹೇಳಿದ್ದಾರೆ. ಆದರೆ ನನಗೆ ತಿಳಿದಿದ್ದ ಹಾಗೆ ಅಧ್ಯಕ್ಷರು ಮತ್ತೊಮ್ಮೆ ಅಧಿಕೃತ ವರದಿಗಾರರ ವರದಿ ವಿಷಯ ಮತ್ತು ಪತ್ರಿಕೆಗಳಲ್ಲಿ ಬಂದಿದ್ದ ವಿಷಯ ಮತ್ತು ಸರ್ಕಾರದವರು ಏನು ಹೇಳಿದ್ದಾರೆಂಬ ವಿಷಯಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಇಲ್ಲಿ